## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 509

**ಸದಸ್ಯರ ಹೆಸರು** : ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ
: (ನಾಮ ನಿರ್ದೇಶನ ಹೊಂದಿದವರು)

**ಉತ್ತರಿಸಬೇಕಾದ ದಿನಾಂಕ** : 19.02.2024

**ಉತ್ತರಿಸುವವರು** : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಅರಣ್ಯ ಒತ್ತುವರಿಯನ್ನು ಪರಿಹರಿಸುವ ಸಲುವಾಗಿ ಸರ್ಕಾರ ರೂಪಿಸಿರುವ ನಿಯಮ, ಮಾನದಂಡ ಮತ್ತು ಕಾನೂನು ಕ್ರಮಗಳೇನು;</td><td>ಸರ್ಕಾರದ ಸುತ್ತೋಲೆ ಸಂಖ್ಯೆ.ಅಪಜೀ 45 ಎಫ್‌ಜಿಎಲ್ 2015 ದಿನಾಂಕ 13.03.2015ರಲ್ಲಿ ಅರಣ್ಯ ಒತ್ತುವರಿ ಮತ್ತು ಆತನ ಪಟ್ಟಾ ಜಮೀನು ಸೇರಿ ಮೂರು ಎಕರೆಗಿಂತ ಕಡಿಮೆ ಇರುವ ಒತ್ತುವರಿದಾರರಿಗೆ ಪುನರ್ ವಸತಿ ಯೋಜನೆಯನ್ನು ಕಲ್ಪಿಸುವ ಪೂರ್ವದಲ್ಲಿ ಅವರನ್ನು ಒಕ್ಕಲೆಬ್ಬಿಸಬಾರದು ಎಂದು ಸೂಚಿಸಲಾಗಿದೆ. ದಿನಾಂಕ 28.06.2016ರಲ್ಲಿ ಇದೇ ಸೂಚನೆಯನ್ನು ಪುನರುಚ್ಛಿಸಲಾಗಿದೆ.</td></tr>
<tr><td>ಆ</td><td>ಅರಣ್ಯ ಒತ್ತುವರಿಯನ್ನು ಕೆಲವು ಷರತ್ತುಗಳನ್ನು ವಿಧಿಸಿ, ಸಕ್ರಮಗೊಳಿಸಲು 1996ರಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ, ಆ ಕುರಿತು ಎಷ್ಟು ಪ್ರಸ್ತಾವನೆಗಳನ್ನು ಸಕ್ರಮಗೊಳಿಸಲು ಅನುಮತಿ ಕೋರಿ ಸಲ್ಲಿಸಲಾಗಿತ್ತು;</td><td>ದಿನಾಂಕ 27.4.1978ರ ಪೂರ್ವದ ಅತಿಕ್ರಮಣ ಪ್ರಕರಣಗಳನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು ಈ ಕೆಳಕಂಡಂತೆ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಅನುಮೋದನೆ ನೀಡಿರುತ್ತದೆ.
<table>
<tr><th>ಕ್ರ. ಸಂ.</th><th>ವಿವರ</th><th>ಕುಟುಂಬ ಗಳ ಸಂಖ್ಯೆ.</th><th>ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)</th></tr>
<tr><td>1</td><td>ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ</td><td>21569</td><td>17007.23</td></tr>
<tr><td>2</td><td>ಭಾರತ ಸರ್ಕಾರದಿಂದ ಅನುಮೋದನೆ ಪಡೆದಿರುವುದು</td><td>19348</td><td>14848.83</td></tr>
<tr><td>3</td><td>ಜಿಲ್ಲಾಧಿಕಾರಿಗಳಿಂದ ಸಕ್ರಮಗೊಂಡಿರುವುದು</td><td>7828</td><td>5234.10</td></tr>
<tr><td>4</td><td>ಜಿಲ್ಲಾಧಿಕಾರಿಗಳಿಂದ ತಿರಸ್ಕೃತಗೊಂಡಿರುವುದು</td><td>5259</td><td>4735.35</td></tr>
<tr><td>5</td><td>ಜಿಲ್ಲಾಧಿಕಾರಿಗಳಿಂದ ಸಕ್ರಮಾತಿಗೊಳ್ಳಲು ಬಾಕಿ ಇರುವುದು</td><td>6261</td><td>4879.38</td></tr>
</table>
ಮೇಲೆ ವಿವರಿಸಿದಂತೆ ಕೇಂದ್ರ ಸರ್ಕಾರವು ಅರಣ್ಯ ಒತ್ತುವರಿಯನ್ನು ಕೆಲವು ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿ ಅಂತಿಮಗೊಳಿಸಿರುತ್ತಾರೆ.</td></tr>
<tr><td>ಇ</td><td>ಸಕ್ರಮಗೊಳಿಸಲು ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಎಷ್ಟು ಪ್ರಕರಣಗಳು ಕೈಬಿಟ್ಟು ಹೋಗಿದ್ದವು;</td><td>ಇಂತಹ ಯಾವುದೇ ಪ್ರಕರಣಗಳಿರುವುದಿಲ್ಲ</td></tr>
</table>

| | | |
|---|---|---|
| ಈ | ಸಕ್ರಮಗೊಳಿಸಲು ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಪ್ರಕರಣಗಳು ಕೈಬಿಟ್ಟು ಹೋಗಿದ್ದಲ್ಲಿ, ಅವುಗಳ ಕುರಿತು ಸರ್ಕಾರ ಆ ನಂತರದಲ್ಲಿ ಏನು ಕ್ರಮ ಕೈಗೊಂಡಿದೆ; | ಉದ್ಭವಿಸುವುದಿಲ್ಲ |
| ಉ | ರಾಜ್ಯದಲ್ಲಿ ಎಲ್ಲಾ ಅರ್ಹ ಒತ್ತುವರಿದಾರರ ಪ್ರಕರಣಗಳನ್ನು ಈಗಾಗಲೇ ಸಕ್ರಮಗೊಳಿಸಲಾಗಿದೆಯೇ; ಇದುವರೆಗೆ ಸಕ್ರಮಗೊಳಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು? | ಈ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಸಕ್ರಮಾತಿಗೆ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅರ್ಹ ಒತ್ತುವರಿದಾರರಿಂದ ಪೂರಕ ದಾಖಲೆಗಳನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |

**ಸಂಖ್ಯೆ: ಅಪಜೀ 13 ಎಫ್‌ಜಿಎಲ್ 2024(E)**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು